# ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮
ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೪೪೮   ಫ್ಯಾಕ್ಸ್ : ೨೬೫೨೩೮೬೭
http://www.kasapa.in   e-mail : kannadaparishattu@gmail.com


ಕ್ರಮಸಂಖ್ಯೆ : ಕಸಾಪ / **ಪ್ರಕಟಣೆ**/ ೨೦೨೩-೨೪    ದಿನಾಂಕ : ೧೬-೧೨-೨೦೨೩

*ಇವರಿಗೆ*
**ಸಂಪಾದಕರು / ಮುಖ್ಯ ವರದಿಗಾರರು**
.................................................ಬೆಂಗಳೂರು

ಪತ್ರಿಕಾ ವರದಿ

## ಶಂಕರ ಬಿದರಿ ನಾಡಿಗೆ ಹೆಮ್ಮೆಯನ್ನು ತಂದಿದ್ದಾರೆ

## - ನಾಡೋಜ ಡಾ.ಮಹೇಶ ಜೋಶಿ

-

- **ಬೆಂಗಳೂರು:** ಬುದ್ಧಿ ಬಲ ಮತ್ತು ದೈವ ಬಲದಿಂದ ಶಂಕರ ಬಿದರಿಯವರು ಮಹತ್ವದ ಸಾಧನೆಯನ್ನು ಮಾಡಿದ್ದಾರೆ. ಅವರು ನಾಡಿನ ಹೆಮ್ಮೆಯೆಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿಯವರು ವರ್ಣಿಸಿದರು. ಅವರು ಕನ್ನಡ ಸಾಹಿತ್ಯ ಪರಿಷತ್ತು ಇವತ್ತು ಏರ್ಪಡಿಸಿದ್ದ 'ಕನ್ನಡದ ಧ್ರುವತಾರೆ' ಕಾರ್ಯಕ್ರಮದಲ್ಲಿ ಶಂಕರ ಬಿದರಿಯವರ ಜೊತೆಗಿನ ಸಂವಾದಕ್ಕೆ ಮೊದಲು ಪ್ರಾಸ್ತಾವಿಕ ಮಾತುಗಳನ್ನಾಡುತ್ತಿದ್ದರು. ಕರ್ನಾಟಕದ ಇತಿಹಾಸವೆಂದರೆ ಅದು ಸಾಧಕರ ಇತಿಹಾಸ, ಇತಿಹಾಸವನ್ನು ಓದಿದವರು ಇತಿಹಾಸವನ್ನು ಸೃಷ್ಟಿ ಮಾಡುತ್ತಾರೆ ಎಂದ ಅವರು ಕರ್ನಾಟಕ ಎಲ್ಲಾ ಕ್ಷೇತ್ರಗಳಲ್ಲಿ ಸೃಷ್ಟಿಸಿದ ಸಾಧಕರನ್ನು ಸ್ಮರಿಸಿ ಕೊಂಡರು. ಸರಳತೆ ಮತ್ತು ದಕ್ಷತೆಯಿಂದ ಮಹತ್ವವಾದದನ್ನು ಸಾಧಿಸಿದ ಶಂಕರ ಬಿದರಿಯವರ ಸವಾಲಿನ ಜೀವನದ ಮೇಲೆ ಕಿರುನೋಟವನ್ನು ಅವರು ತಮ್ಮ ಮಾತುಗಳ ಮೂಲಕ ಬೀರಿದರು.
-
- ಸಂವಾದವನ್ನು ಆರಂಭಿಸಿದ ನಾಡೋಜ.ಡಾ.ಮಹೇಶ ಜೋಶಿಯವರು ಶಂಕರ ಬಿದರಿಯವರ ಬಾಲ್ಯದ ಕುರಿತು ಕೇಳಿದರು. ತಮ್ಮ ಬಾಲ್ಯದ ವಿಶಿಷ್ಟತೆಯನ್ನು ಸ್ಮರಿಸಿ ಕೊಂಡ ಶಂಕರ ಬಿದರಿಯವರು ಸೈನ್ಯ ಸಹಾಯ ನಿಧಿಗೆ ತಮ್ಮ ಬೆಲೆ ಬಾಳುವ ಉಂಗುರವನ್ನು ಹಾಕಿದ್ದು, ಇದು ತಿಳಿದ ನಂತರ ತಾಯಿ ಎಂದಿಗೂ ಸುಳ್ಳನ್ನು ಹೇಳ ಬಾರದು ಎನ್ನುವ ಪಾಠವನ್ನು ಕಲಿಸಿದ್ದನ್ನು ಸ್ಮರಿಸಿ ಅದು ತಮ್ಮ ಬದುಕನ್ನೇ ರೂಪಿಸಿತು ಎಂದರು. ಅದರಂತೆ ಒಂಬತ್ತನೆಯ ವಯಸ್ಸಿನಿಂದಲೂ ಬಂದ ದೈವ ಪೂಜೆಯ ಪದ್ಧತಿ ತಮ್ಮಲ್ಲಿ ಆತ್ಮ ವಿಶ್ವಾಸವಾಗಿ ರೂಪುಗೊಂಡ ರೀತಿಯನ್ನೂ ವರ್ಣಿಸಿದರು.
-
- ಸಭಿಕರೊಂದಿಗಿನ ಸಂವಾದದಲ್ಲಿ ಶಂಕರ ಬಿದರಿಯವರು ತಮ್ಮ ಜೀವನದ ಹಲವು ಪ್ರಮುಖ ಘಟನೆಗಳನ್ನು ಬಿಚ್ಚಿಡುತ್ತಾ ಸಾಗಿದರು. ಟೆಲಿಫೋನ್ ಅಪರೇಟರ್ ಆಗಿ ವೃತ್ತಿ ಜೀವನವನ್ನು ಆರಂಭಿಸಿದ ಅನಿವಾರ್ಯತೆ, ಇಂಡಿಗೆ ಬಂದ ಸಂದರ್ಭವನ್ನು ವಿವರಿಸಿ ಕೃಷ್ಣ ಕುಮಾರ್ ಅವರಿಂದ ಪ್ರೇರಣೆ ಪಡೆದು ಬಾಹ್ಯವಾಗಿ ಪದವಿಯನ್ನು ಪಡೆದು ನಂತರ ಕೆ.ಎ.ಎಸ್ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರೈಸಿ ಅಸಿಸ್ಟೆಂಟ್ ಕಮೀಷನರ್ ಆಗಿದ್ದು ನಂತರ ಪೋಲೀಸ್ ಅಧಿಕಾರಿಗಳ ಸಂಪರ್ಕ ಬೆಳೆದು ಐ.ಪಿ.ಎಸ್ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರೈಸಿದ್ದು ಹೀಗೆ ತಮ್ಮ ಬದುಕಿನ ಸಾಧನೆಯ ಟ್ವಿಲುಗಳನ್ನು ಸ್ವಾರಸ್ಯಕರವಾಗಿ ತೆರೆದಿಟ್ಟರು ವೀರಪ್ಪನ್

ಸಮಸ್ಯೆ ಉಂಟಾಗಲು ಕಾರಣಗಳನ್ನು ಶ್ರೀರಂಗ ಪಟ್ಟಣ ಒಪ್ಪಂದದ ಕಾಲದಿಂದಲೂ ಎಳೆ ಎಳೆಯಾಗಿ ಬಿಡಿಸಿಟ್ಟ ಅವರು ಗಂಧದ ಕಳ್ಳನಾದ ಅವನು ದಂತ ಕಳ್ಳನಾಗಿ ಅಪಹರಣಕಾರನಾಗಿ ಬೆಳೆದ ಪರಿಯನ್ನು ವಿವರಿಸಿ ತಾವು ವೀರಪ್ಪನ್ ತಂಡದ ವಿರುದ್ಧ ಮಾಡಿದ ಹೋರಾಟವನ್ನು ಇನ್ನೂರರಷ್ಟಿದ್ದ ಅವನ ತಂಡವನ್ನು ಐದಕ್ಕೆ ಇಳಿಸಿದ ರೀತಿಯನ್ನು ವಿವರಿಸಿದರು. ಬಳ್ಳಾರಿಯಲ್ಲಿ ನಕ್ಸಲೇಟ್ ಭೀಮ್ಲಾ ನಾಯಕ್ ನಿಗ್ರಹವನ್ನೂ ಕೂಡ ಶಂಕರ ಬಿದರಿಯವರು ರೋಚಕವಾಗಿ ನಡೆದ ಘಟನೆಗಳನ್ನು ವಿವರಿಸಿ ತೆರೆದಿಟ್ಟರು.

-

- ಸಾಮಾಜಿಕ ಕಾನೂನುಗಳು ಪರಿಣಾಮಕಾರಿಯಾಗಿ ಜಾರಿಗೆ ಬರಲು ಸಮಾಜ ಜಾಗೃತವಾಗ ಬೇಕು ಎಂದ ಅವರು ಬದಲಾವಣೆ ಹೆದರಿಕೆಯಿಂದ ಆಗುವುದಿಲ್ಲ, ದಾರ್ಶನಿಕರಿಂದ ಆಗುತ್ತದೆ ಎಂದು ಮಾರ್ಮಿಕವಾಗಿ ನುಡಿದರು. ಪೋಲೀಸ್ ಇಲಾಖೆಯಲ್ಲಿನ ಭ್ರಷ್ಟಾಚಾರವನ್ನು ಸಮುಷ್ಟಿಯಾಗಿ ಗ್ರಹಿಸ ಬೇಕು ಎಂದ ಅವರು ಸಮಾಜ ಅಮೂಲಾಗ್ರವಾಗಿ ಬದಲಾಗ ಬೇಕು ಎಂದರು. ತಾವು ಎಂದಿಗೂ ರಾಜಕಾರಣಿಗಳ ಋಣದಲ್ಲಿ ಇರಲಿಲ್ಲ ಎಂದು ಹೇಳಿ ರಾಜಕೀಯ ಪ್ರವೇಶದ ಅಭಿಲಾಷೆ ಇದ್ದರೂ ವಾತಾವರಣ ಅದಕ್ಕೆ ಪೂರಕವಾಗಿಲ್ಲ. ಸದಾ ಜನ ಸಂಪರ್ಕವನ್ನು ಇಟ್ಟು ಕೊಂಡು ಸಮಾಜಕ್ಕೆ ಒಳಿತನ್ನು ಮಾಡುವ ಪ್ರಯತ್ನವನ್ನು ಮಾಡುತ್ತಿದ್ದೇನೆ ಎಂದು ತಮ್ಮ ಸಮಾಜ ಕಾಳಜಿಯ ಮುಖವನ್ನು ತೆರೆದಿಟ್ಟ ಶಂಕರ ಬಿದರಿಯವರು ಸರ್ಕಾರ ಮತ್ತು ಇಲಾಖೆಗೆ ಸದಾ ಮಹತ್ವ ಕೊಡುತ್ತಾ ಬಂದಿದ್ದರಿಂದ ಕೌಟಂಬಿಕ ಹೊಣೆಯನ್ನು ಮಡದಿಗೆ ಬಿಟ್ಟಿದ್ದಾಗಿ ಪ್ರಾಮಾಣಿಕವಾಗಿ ತಮ್ಮ ಅಂತರಾಳವನ್ನು ತೆರದಿಟ್ಟರು.

-

- ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ದರ್ಶಿಗಳಾದ ನೇ.ಭ.ರಾಮಲಿಂಗ ಶೆಟ್ಟರು ಸ್ವಾಗತಿಸಿದರೆ ಇನ್ನೊಬ್ಬ ಕಾರ್ಯದರ್ಶಿ ಡಾ.ಪದ್ಮಿನಿ ನಾಗರಾಜು ಅವರು ಸಂವಾದವನ್ನು ನಿರ್ವಹಿಸಿದರು. ಕೋಶಾಧ್ಯಕ್ಷರಾದ ಪಟೇಲ್ ಪಾಂಡು ಅವರು ಕಾರ್ಯಕ್ರಮವನ್ನು ನಿರ್ವಹಿಸಿದರು

**- ಶ್ರೀಧರಮೂರ್ತಿ ಎನ್.ಎಸ್.**

ಸಂಚಾಲಕರು, ಪ್ರಕಟಣಾ ವಿಭಾಗ

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು